# ಆಹಾ ಸುದ್ದಿ!

★ ಸಸಿತೋಟ



ಪಾಕಿಸ್ತಾನದ ರೂಪದರ್ಶಿ, ಬಾಲಿವುಡ್ ನಟಿ ವೀಣಾ ಮಲ್ಲಿಕ್‌ಗೆ ಯಾರೂ ಮಾಡದ್ದನ್ನು ತಾನು ಮಾಡಿ ದಾಖಲೆ ಬರೆಸುವ ಆಸೆಯಂತೆ. ಈಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಆಕೆ ಮುಂಬೈ ಬೀದಿಯಲ್ಲಿ ನಿಂತು ಕೈ ಮೇಲೆ ಅಭಿಮಾನಿಗಳಿಂದ ಮುತ್ತನ್ನು ಒತ್ತಿಸಿಕೊಂಡಳು. ಕೈ ಮೇಲೆ ನಿಮಿಷಕ್ಕೆ ನೂರಕ್ಕೂ ಅಧಿಕ ಮುತ್ತಿನ ಮುದ್ರೆ ಹಾಕಿಸಿಕೊಳ್ಳುವ ದಾಖಲೆಯಂತೆ. ಮುಂದಿನ ಹುಟ್ಟುಹಬ್ಬಕ್ಕೆ ಈಗಲೇ ತಯಾರಿ ನಡೆಯುತ್ತಿರಬಹುದು, ಅಭಿಮಾನಿಗಳಿಂದ!

ಮೆಕ್ಸಿಕೋದ 'ಚೌಕುಳಿ ವ್ಯಕ್ತಿ' ಮ್ಯಾಟ್ ಗೋನ್ ಓಡಾಡುತ್ತಿದ್ದರೆ ನಿಜವಾಗಲೂ ಚೌಕುಳಿ ವಿನ್ಯಾಸದ 'ಮ್ಯಾಟ್' ಓಡಾಡಿದಂತೆ. ಅದೇನು ಮೈಮೇಲೆ ಚೌಕಾಬಾರಾ ಆಡುತ್ತಾನೋ ಏನೋ! ಈಚೆಗೆ ಮೆಕ್ಸಿಕೋದಲ್ಲಿ ನಡೆದ ಟ್ಯಾಟ್ಟೂ ಪ್ರದರ್ಶನದಲ್ಲಿ ಈತ ನಿಂತ ಭಂಗಿ ಪಾಯಿಂಟೆಡ್ ಶೂ ಎಷ್ಟು ಚೂಪಾಗಿರಬೇಕು ಎಂಬುದಕ್ಕೆ ಜಾಹೀರಾತು ನೀಡಿದಂತಿದೆ.



ಜೈಲಿನಲ್ಲಿ ಅಪರಾಧಿಗಳನ್ನು ಕೂಡಿ ಹಾಕುವುದು ಗೊತ್ತು. ಆದರೆ ವಕೀಲನನ್ನೇ ಕೂಡಿ ಹಾಕಿದರೆ.. ಅಮೆರಿಕದ ಸ್ಯಾನ್ ಡಿಯಾಗೋದ ಜೈಲಿನಲ್ಲಿ ಕಕ್ಷಿದಾರನನ್ನು ಭೇಟಿಯಾದ ವಕೀಲ ಲೋಪೆಜ್ ರಾತ್ರಿ ನಾಲ್ಕು ಗಂಟೆಗಳ ಕಾಲ ಅಲ್ಲೇ ಸಿಕ್ಕಿಹಾಕಿಕೊಂಡು ಪರದಾಡಬೇಕಾಯ್ತಂತೆ. ಮೊಬೈಲ್ ಇಲ್ಲ, ಕಿರುಚಿದರೆ, ಬಾಗಿಲು ಬಡಿದರೆ ಕೇಳಿಸಿಕೊಳ್ಳಲು ಸಿಬ್ಬಂದಿ ಸಮೀಪದಲ್ಲಿ ಇಲ್ಲ. ಅಮೆರಿಕಾದಲ್ಲಿ ಈಗ ಜೈಲೆಂದರೆ ಅಪರಾಧಿಗಳು ಮಾತ್ರವಲ್ಲ, ವಕೀಲರೂ ಹುಷಾರಾಗಿರಬೇಕು.

ನಿರಂತರ ಸಿಳ್ಳೆ ಹಾಕುವ ಪೋರ್ಟ್‌ಲ್ಯಾಂಡ್‌ನ ರಾಬರ್ಟ್ ಸ್ಮಿತ್ ವಿರುದ್ಧ ವ್ಯಾಪಾರಿಗಳು ಕ್ಯಾತೆ ತೆಗೆದು ಕೇಸ್ ಹಾಕಿದರು. ಕೋರ್ಟ್ ತೀರ್ಪಿನ ಪ್ರಕಾರ ಸ್ಮಿತ್ ಸಿಳ್ಳೆ ಹಾಕಬಹುದು, ಆದರೆ ಒಂದೇ ಕಡೆ ನಿಲ್ಲುವ ಹಾಗಿಲ್ಲ. ಸ್ಮಿತ್‌ಗೆ ಈಗ ಇನ್ನೂ ಖುಷಿ. ರಸ್ತೆಯಲ್ಲಿ ಸಾಗುವ ಸುಂದರಿಯರನ್ನು ನೋಡಿ ಸಿಳ್ಳೆ ಹಾಕಬಹುದು. ಆದರೆ ಅಲ್ಲಿ ನಿಲ್ಲದೆ ಮುಂದೆ ಹೋಗುವುದರಿಂದ ಸುಂದರಿಯರು ಆನಂದಿಸುವ ಹಾಗೂ ಇಲ್ಲ, ಅರೋಪಿಸುವ ಹಾಗೂ ಇಲ್ಲ.



ಚೀನಾದಲ್ಲಿ ಪ್ರದರ್ಶನಕ್ಕಿಟ್ಟ 1.8 ಮೀಟರ್ ಎತ್ತರದ ಶೂ. ಈ ಶೂಗೆ 3,18,000 ಹರಳುಗಳನ್ನು ಕೂರಿಸಲಾಗಿದೆಯಂತೆ. ಬೆಲೆ 2,688 ಡಾಲರ್. ಚೀನಾದಲ್ಲಿ ಖರೀದಿಸುವವರು ಅಸಲಿಯೋ, ಮಾರುವವರು ಅಸಲಿಯೋ ಎಂದು ನಿರ್ಧರಿಸುವುದೂ ಕಷ್ಟವೇ!



ಈತ ಅಮೆರಿಕದ ಡ್ಯಾನಿ ವೊಮಿಟ್. ಆರೂವರೆ ಇಂಚು ಉದ್ದದ ಮೊಳೆಯನ್ನು ಸುತ್ತಿಗೆಯಿಂದ ಮೂಗಿನ ಹೊರಳೆಗೆ ಬಡಿದುಕೊಂಡು ಮತ್ತೆ ಕಿತ್ತು ತೆಗೆವ ಹುಚ್ಚು ಸಾಹಸಿ. ಜನ ಅಚ್ಚರಿಯಿಂದ ಬಾಯಿ ಬಿಟ್ಟುಕೊಂಡು ನೋಡಿದರೆ, ಈ ಮೂಗು- ಮೊಳೆಯ ಸಾಹಸಿ ನೋವನ್ನು 'ವೊಮಿಟ್'ನಲ್ಲಿ ಆಚೆ ಹಾಕಿ ಬಿಡುತ್ತಾನೋ ಏನೋ!